ಫ್ಯಾಕ್ಟರಿಗಳು ಮನೆ ಹತ್ತಿರದಲ್ಲೇ ಇರುವುದರಿಂದ ವಿದ್ಯುತ್‌ಗೆ ಸಾಕಷ್ಟು ಶಕ್ತಿ ಇರಲಿಲ್ಲ.

ಫ್ಯಾನಿನ ರೆಕ್ಕೆಗಳನ್ನು ನೋಡುತ್ತಾ ಅವಳು ಹಾಸಿಗೆಯ ಮೇಲೆ ಮೇಲ್ಮುಖಮಾಡಿ ಮಲಗಿದಳು.

ಹೆಸರು ಗೊತ್ತಾಗದ ಯಾವುದೊ ಒಂದು ಉಳಿದುಕೊಂಡಿದೆ. ಅದು ಕೋಣೆಯೊಳಗೊ ಹೊರಗೊ ಎನ್ನುವುದು ಸಹ ನಿರ್ಣಯಿಸಲು ಸಾಧ್ಯವಾಗುತ್ತಿಲ್ಲ. ಗಂಡ ಮತ್ತೊಂದು ಕಡೆ ತಿರುಗಿ ಮಲಗಿಕೊಂಡು ನಿದ್ರೆಗೆ ಜಾರಿಯಾಗಿತ್ತು. ಬೀದಿದೀಪದ ಬೆಳಕು ಕೋಣೆಯೊಳಕ್ಕೂ ಇಣುಕುತ್ತಿತ್ತು. ಕಿಟಕಿಯನ್ನು ಉಜ್ಜಿಕೊಂಡು ಲೆಕ್ಕವಿಲ್ಲದಷ್ಟು ಕಬ್ಬಿಣದ ಸರಳುಗಳು ಸಮಾನಾಂತರವಾಗಿ ಉದ್ದವಾಗುತ್ತಿರುವುದು ಅವಳ ಕಣ್ಣಿಗೆ ಬಿತ್ತು.

ಲೋಹದ ತಂತಿಗಳಿಂದ ಪೋಣಿಸಿದ ಒಂದು ಪಂಜರದೊಳಗೆ ತಾನು ಸಿಕ್ಕಿಹಾಕಿಕೊಂಡಿದ್ದೇನೆಂಬ ಅನಿಸಿಕೆ ಅವಳಿಗೆ ಕಾಡ ತೊಡಗಿತು. ಆ ಪಂಜರಕ್ಕೆ ಕಿಟಕಿಗಳೂ ಕಿಟಕಿಗಳಿಗೆ ತಂತಿಯ ಬಲೆಗಳೂ ಇದ್ದವು.

ನರೆತ ಆಕಾಶಕ್ಕೆ ಗಾಯಗೊಳಿಸುವ ತಂತಿಗಳಲ್ಲದೆ ಬೇರೇನೂ ಇಲ್ಲ.

ಆದರೆ, ಶಬ್ದಗಳಿವೆ.

ನಿದ್ರಿಸದ ನಗರಕ್ಕೆ ಅಸಂಖ್ಯಾತ ಶಬ್ದಗಳು.

ಶಬ್ದಗಳನ್ನು ಬಿಡಿಸಿಕೊಂಡು ಅವಳು ತನ್ನ ವಾಸಸ್ಥಾನವಾದ ಹೊಸ ನಗರವನ್ನು ಕಂಡುಕೊಳ್ಳಲು ಶ್ರಮಿಸುತ್ತಿದ್ದಳು. ಎಲ್ಲ ಶಬ್ದಗಳನ್ನು ಹಿಂಸಿಸಿ ನರಳುವಂತೆ ಮಾಡಿ ಕೊಲ್ಲುವ ಶಬ್ದ.

ಒಣಗಿದ ಗಂಟಲಿನೊಂದಿಗೆ ಅವಳು ನಿದ್ರೆಗಾಗಿ ಕಾದುಕೊಂಡು ಮಲಗಿದ್ದಳು.

ಹೂಜಿಯಲ್ಲಿದ್ದ ನೀರು ಖಾಲಿಯಾಗಿದೆ.

ಕಿರಿಕಿರಿಯೆನಿಸುವ ಆ ಶಬ್ದ ಯಾವ ಮೂಲೆಯಿಂದ ಹೊರಡುತ್ತಿದೆಯೆನೊ?

ಬೆಳಕು ಹರಿದಾಗ...

ತನ್ನ ನಿದ್ರೆಯನ್ನು ಹೊಡೆದೋಡಿಸಿದ್ದ ಆ ಶಬ್ದ ಯಾವ ಮೂಲದಿಂದ ಬಂದಿದ್ದು ಅಂತ ಅವಳಿಗೆ ಗೊತ್ತಾಗಿ ಹೋಯಿತು.

ತೆಂಗಿನ ಮರಗಳ ತಲೆಯಿಂದ ಅವುಗಳು ತಮ್ಮ ಕಪ್ಪು ರೆಕ್ಕೆಗಳನ್ನು ಹರಡಿಕೊಂಡು ಮೇಲಕ್ಕೆ ಹಾರಿದ್ದವು.

ಪ್ರಭಾತದ ವಾತಾವರಣವು ಎಣೆಯಿಲ್ಲದಷ್ಟು ಕಪ್ಪು ತುಣುಕುಗಳನ್ನು ತುಂಬಿಕೊಂಡು ಮತ್ತೆ ಇದ್ದಕ್ಕಿದ್ದಂತೆ ಅಪ್ರತ್ಯಕ್ಷ್ಯವಾಗುತ್ತಿದೆಯೆಂದನಿಸಿತು.

ಒಂದು ಕಪ್ಪು ಕನಸಿನಂತೆ ಅವುಗಳು ಅವಳಲ್ಲಿ ದಿಗಿಲು ಹುಟ್ಟಿಸಿದವು.

ತೆಂಗಿನ ಗರಿಗಳ ಹಸಿರುಬಣ್ಣ ಕಪ್ಪನೆಯ ಬೊಟ್ಟುಗಳಿಂದಾಗಿ ಕಾಣದಂತಾಗುತ್ತಿದೆ.

ಹಗಲಿನ ಕಣ್ಣುಗಳು ತೆರೆಯುತ್ತಿದ್ದಂತೆ ಅವುಗಳು ಪಡುವಣದ ಕಡೆಗೆ ಹಾರಿ ಹೋಗಲಾರಂಭಿಸಿದವು. ಕಡಲತೀರದ ಕಡೆಗೆ. ಕಡಲತೀರದಿಂದ ಕೊಳೆತ ಮೀನಿನ ಕೆಟ್ಟವಾಸನೆ ತಲುಪತೊಡಗಿತು.

ಬೆಳಗಿನ ಉಪಹಾರ ಸೇವಿಸಲು ಕೂರುವಾಗ ಅವುಗಳು ಅವಳ ಕಣ್ಣುಗಳಲ್ಲಿ ತುಂಬಿಕೊಂಡಿದ್ದವು.

ಆಳವಾಗಿ ಕಪ್ಪಾಗಿ ಕೊಬ್ಬಿದ ಅವಳ ಕಣ್ಣುಗಳನ್ನು ನೋಡಿ ಎದುರಿನಲ್ಲಿ ಕುಳಿತಿದ್ದ ಗಂಡ ಕೇಳಿದ:

''ಶ್ಯಾಮಾ, ನೀನು ಏನು ಆಲೋಚನೆ ಮಾಡ್ತಾ ಇದಿಯಾ?...''

ಮೇಜಿನ ಎದುರಿನ ಕಲ್ಲುಗೋಡೆಗಳಲ್ಲಿ, ಅವುಗಳಲ್ಲಿ ಕೆಲವು ಆಗಲೂ ಸಾಲಾಗಿ ನಿಂತಿದ್ದವು. ಅವುಗಳ ಚೂಪಾದ ನಯನಗಳು ಅವಳ ಮುಂದಿದ್ದ ಆಹಾರ ಪದಾರ್ಥಗಳ ಮೇಲಿದ್ದವು.

ಬೇಯಿಸಿದ ಮೊಟ್ಟೆಪಲ್ಯದಲ್ಲಿ ಅದ್ದಿದ ರೊಟ್ಟಿ ತುಂಡುಗಳ ರುಚಿಯನ್ನು ಆಸ್ವಾದಿಸುತ್ತಾ ಜಗಿಯುವುದರ ನಡುವೆ ಗಂಡ ಕೇಳಿದ: